# ಸಮಗ್ರ ಕಲಿಕೆಗಾಗಿ ಸಮಯದ ಸಂಯೋಜನೆ

ಬಾನಿಶ್ರೀ ಮೊಹಾಪಾತ್ರ



ನನ್ನ ತರಗತಿಯಲ್ಲಿ, ನಾನು ಮಕ್ಕಳ ಕಲಿಕೆಗೆ ನೆರವಾಗುವಂತೆ ಆಲಿಸುವಿಕೆ, ಚರ್ಚೆ, ಹೊಸ ಆಲೋಚನೆಗಳ ಹಂಚಿಕೆ, ಅನ್ವೇಷಣೆ, ಆಟ, ಚಿತ್ರ ರಚನೆ, ಓದುವಿಕೆಗೆ ಮತ್ತು ಬರವಣಿಗೆ ಇವುಗಳಿಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿಕೊಡುತ್ತೇನೆ. ಬೋಧನಾ–ಕಲಿಕೆಯಲ್ಲಿ ನಾನು ಅನುಸರಿಸುವ ವಿಧಾನವು ಕಲಿಕೆಯ ವಿಷಯವಸ್ತುವಿಗೆ ಕೇಂದ್ರಿತವಾಗಿರುತ್ತದೆ ಮತ್ತು ಕಲಿಕೆಗೆ ಇರುವ ಹಲವು ಕ್ಷೇತ್ರಗಳನ್ನು ಸಮನ್ವಯಗೊಳಿಸಲು ಇಲ್ಲಿ ನಾನು ಪ್ರಯತ್ನಿಸುತ್ತೇನೆ. ವಿದ್ಯಾರ್ಥಿಗಳನ್ನು ಕಲಿಕೆಯಲ್ಲಿ ತೊಡಗಿಸಲು ಮತ್ತು ತರಗತಿಯಲ್ಲಿ ಅವರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ದೃಶ್ಯ–ಶ್ರವ್ಯ ಸಾಧನಗಳು, ಹಲವು ಚಟುವಟಿಕೆಗಳು, ಚಿತ್ರಗಳು ಮತ್ತು ಬೋಧನಾ–ಕಲಿಕಾ ಸಾಮಗ್ರಿಗಳನ್ನು ನಾನು ಬಳಸುತ್ತೇನೆ. ಇವು ಮಾತ್ರವಲ್ಲದೆ, ಪ್ರತಿ ದಿನ ಸಂಗೀತ/ಚಿತ್ರಕಲೆ ಹಾಗೂ ದೈಹಿಕ ಶಿಕ್ಷಣದ ತರಗತಿಗಳು ಇರುವಂತೆ ನೋಡಿಕೊಳ್ಳುತ್ತೇನೆ.

> ದಿನವೊಂದನ್ನು ಬಹಳ ಜಾಗರೂಕವಾಗಿ ಸಂಯೋಜಿಸಬೇಕು ಹೀಗಾದಾಗ ಬೆಳವಣಿಗೆಯ ಎಲ್ಲ ಕ್ಷೇತ್ರಗಳಿಗೂ ಅಗತ್ಯವಿರುವಷ್ಟು ಸಮಯ ದೊರೆಯುತ್ತದೆ ಮತ್ತು ಅವುಗಳಿಗೆ ಗಮನ ಕೊಡಲು ಸಾಧ್ಯವಾಗುತ್ತದೆ. ಬೆಳವಣಿಗೆಯ ಪ್ರತಿ ಕ್ಷೇತ್ರವು ಮತ್ತೊಂದು ಕ್ಷೇತ್ರದೊಂದಿಗೆ ಸಂಬಂಧ ಹೊಂದಿರುತ್ತದೆ (ಉದಾಹರಣೆಗೆ, ಉತ್ತಮವಾದ ಕಥೆಯೊಂದನ್ನು ಹೇಳುವುದರಿಂದ ಅದು ಮಕ್ಕಳ ಭಾಷಾ ಬೆಳವಣಿಗೆಗೆ ಮಾತ್ರವಲ್ಲದೆ ಅವರ ಸಾಮಾಜಿಕ–ಭಾವನಾತ್ಮಕ ಹಾಗೂ ನೈತಿಕ ಬೆಳವಣಿಗೆಗೆ ನೆರವಾಗುತ್ತದೆ). ದಿನಚರಿಯು ಎಲ್ಲ ಕ್ಷೇತ್ರಗಳ ಕುರಿತ ವ್ಯಾಪಕವಾದ ಅನುಭವಗಳನ್ನು ಮಕ್ಕಳು ಹೊಂದುವುದಕ್ಕೆ ಈ ವಾಡಿಕೆಯು ವಿಪುಲ ಅವಕಾಶವನ್ನು ಒದಗಿಸಿಕೊಡುತ್ತದೆ ಎಂದು ಖಚಿತಪಡಿಸಿಕೊಳ್ಳುವುದು ಉತ್ತಮ.

**ಮೂಲ: ಬುನಾದಿ ಹಂತಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, ಭಾಗ 7.1. ದಿನವನ್ನು ಆಯೋಜಿಸುವುದು ಪುಟ 187**

ಬುನಾದಿ ಹಂತದಲ್ಲಿನ ಸಮಗ್ರ ಕಲಿಕೆಗಾಗಿ ನಾವು ಅನುಸರಿಸುತ್ತಿರುವ ವಿಧಾನದ ಕೆಲವು ಪ್ರಮುಖ ಅಂಶಗಳು ಇಲ್ಲಿವೆ.

## ವೇಳಾ ಪಟ್ಟಿ

ದೈನಂದಿನ ವೇಳಾಪಟ್ಟಿಯು ಗಣಿತ, ಹಿಂದಿ, ಇಂಗ್ಲಿಷ್, ಬೆಳಗಿನ ಅಸೆಂಬ್ಲಿ ಮತ್ತು ಮಕ್ಕಳ ವಿವಿಧ ಕ್ಲಬ್‌ಗಳ ಚಟುವಟಿಕೆಗಳ ಜೊತೆಗೆ ಸಂಗೀತ, ಕಲೆ ಮತ್ತು ದೈಹಿಕ ಶಿಕ್ಷಣವನ್ನು ಒಳಗೊಂಡಿರುವ ಒಂದು ಸಮತೋಲಿತ ಸಂಯೋಜನೆಯಾಗಿದ್ದು ಮಗುವಿನ ಸಮಗ್ರ ಬೆಳವಣಿಗೆಗೆ ಅದು ನೆರವಾಗುತ್ತದೆ. ಆರಂಭಿಕ ತರಗತಿಗಳಲ್ಲಿ ನಾವು ಭಾಷೆಗಳ ಅಧ್ಯಯನಕ್ಕಾಗಿ ತಲಾ ಎರಡು ಗಂಟೆಗಳು, ಗಣಿತಕ್ಕಾಗಿ ಒಂದು ಗಂಟೆ ಮತ್ತು ದೈಹಿಕ ಶಿಕ್ಷಣ, ಕಲೆ ಮತ್ತು ಸಂಗೀತ ಇವುಗಳಿಗಾಗಿ ಅಂದಾಜು ೩೦ ನಿಮಿಷಗಳನ್ನು ದಿನವೊಂದರಲ್ಲಿ ನಾವು ಮೀಸಲಾಗಿರಿಸುತ್ತೇವೆ. ಭಾಷಾ ತರಗತಿಗಳನ್ನು ನಾವು ಕಲೆ ಮತ್ತು ಸಂಗೀತಗಳ ತರಗತಿಗಳೊಂದಿಗೆ ನಿರಂತರವಾಗಿ ಸಮಗ್ರಗೊಳಿಸಿಕೊಳ್ಳುತ್ತಾ, ಇಂಗ್ಲಿಷ್ ಭಾಷಾ ಕಲಿಕೆಯನ್ನು ಪರಿಸರ ಅಧ್ಯಯನದೊಂದಿಗೆ ಸಂಯೋಜಿಸುತ್ತೇವೆ.

## ದೈನಂದಿನ ಯೋಜನೆ

ಒಬ್ಬ ಶಿಕ್ಷಕಿಯಾಗಿ, ವಿದ್ಯಾರ್ಥಿಗಳ ಪೂರ್ವಜ್ಞಾನ ಹಾಗೂ ಸಾಮಾಜಿಕ ಸಂದರ್ಭದ ಆಧಾರದ ಮೇಲೆ ನಾನು ನನ್ನ ತರಗತಿಗಳನ್ನು ನಿಖರವಾಗಿ ಯೋಜಿಸುತ್ತೇನೆ. ದೃಶ್ಯ–ಶ್ರವ್ಯ ಮಾಧ್ಯಮಗಳು ಹಾಗೂ ಚಟುವಟಿಕೆಗಳ ಮೂಲಕ ಆಲಿಸುವುದು ಮತ್ತು ಮಾತನಾಡುವುದಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ವಿಡಿಯೋಗಳ ವೀಕ್ಷಣೆಗೆಂದೇ ಸಮಯಾವಕಾಶವನ್ನು ಮೀಸಲಾಗಿರಿಸಿರುವುದರಿಂದ ಪಠ್ಯ ವಿಷಯವು ಮಕ್ಕಳಿಗೆ ಪ್ರಸ್ತುತವಾಗಲು ಸಹಾಯಕವಾಗಿದೆ. ದಿನದ ಕೆಲಸಗಳಲ್ಲಿ ತಮ್ಮನ್ನು ಉಲ್ಲಾಸದಿಂದ ತೊಡಗಿಸಿಕೊಳ್ಳಲು ಪ್ರೇರೇಪಿಸುವ ಚಟುವಟಿಕೆಗಳ ಮೂಲಕ ತರಗತಿಗಳು ಪ್ರಾರಂಭಗೊಳ್ಳುತ್ತವೆ, ಆನಂತರದಲ್ಲಿ ಧ್ವನಿಮಾ ವ್ಯಾಯಾಮಗಳು, ಸಂಬಂಧಿತ ವಿಡಿಯೋಗಳು, ಚರ್ಚೆಗಳು, ಹಾಗೂ ಬರವಣಿಗೆಯ ಚಟುವಟಿಕೆಗಳು. ಆಲಿಸುವ ಹಾಗೂ ಮಾತನಾಡುವ ಕೌಶಲಗಳನ್ನು ಮತ್ತು ವ್ಯಾಕರಣವನ್ನು ಅಭಿವೃದ್ಧಿಪಡಿಸಲು 'ತೋರಿಸು ಮತ್ತು ಹೇಳು' ವ ಆಟ, ಪಾತ್ರಾಭಿನಯ, ಹಾಗೂ ಓದುವಿಕೆಯಂತಹ ಹಲವು ಚಟುವಟಿಕೆಗಳನ್ನು ಸಂಯೋಜಿಸಲಾಗಿದೆ.

| 2ನೇತರಗತಿ | | | | | | | | | | | |
|---|---|---|---|---|---|---|---|---|---|---|---|
| **ದಿನ/ ಸಮಯ** | **09:15 - 9:55 (ಬೆ)** | **10:00 (ಬೆ) - 10:45 (ಬೆ)** | **10:45 - 11:30 (ಬೆ)** | **11:30 - 11:35 (ಬೆ)** | **11:35 (ಬೆ) - 12:20 (ಮ)** | **12:20 - 1:05 (ಮ)** | **1:05 (ಮ) - 1:50 (ಮ)** | **1:50 - 2:35 (ಮ)** | **2:35 - 3:20 (ಮ)** | **3:20 - 3:25 (ಮ)** | **3:25 - 4:10 (ಮ)** |
| **ಸೋಮವಾರ** | ಬೆಳಗಿನ ಅಸೆಂಬ್ಲಿ | ಹಿಂದಿ ಗಜೇಂದ್ರ | ಹಿಂದಿ ಗಜೇಂದ್ರ | ಅಲ್ಪಾವಧಿಯ ವಿರಾಮ | ದೈಹಿಕಶಿಕ್ಷಣ ದೇವೇಂದ್ರ | ಊಟದವಿರಾಮ | ಗಣಿತ ಗೌತಮ್ | ಸಂಗೀತ ಖಿಲೇಂದ್ರ | ಇಂಗ್ಲಿಷ್ ಬಾನಿಶ್ರೀ | ಅಲ್ಪಾವಧಿಯ ವಿರಾಮ | ಕಲೆ ಗೌತಮ್ |
| **ಮಂಗಳವಾರ** | ಬೆಳಗಿನ ಅಸೆಂಬ್ಲಿ | ಕಲೆ ಗೌತಮ್ | ಹಿಂದಿ ಗಜೇಂದ್ರ | ಅಲ್ಪಾವಧಿಯ ವಿರಾಮ | ಹಿಂದಿ ಗಜೇಂದ್ರ | ಊಟದವಿರಾಮ | ಗಣಿತ ಗೌತಮ್ | ದೈಹಿಕಶಿಕ್ಷಣ ದೇವೇಂದ್ರ | ಇಂಗ್ಲಿಷ್ ಬಾನಿಶ್ರೀ | ಅಲ್ಪಾವಧಿಯ ವಿರಾಮ | ಗ್ರಂಥಾಲಯ ಗೌತಮ್ |
| **ಬುಧವಾರ** | ಬೆಳಗಿನ ಅಸೆಂಬ್ಲಿ | ಹಿಂದಿ ಗಜೇಂದ್ರ | ಗಣಿತ ಗೌತಮ್ | ಅಲ್ಪಾವಧಿಯ ವಿರಾಮ | ಇಂಗ್ಲಿಷ್ ಮೊಖ್ತಾರ್ | ಊಟದವಿರಾಮ | ಗಣಿತ ಗೌತಮ್ | ಸಂಗೀತ ಖಿಲೇಂದ್ರ | ಇಂಗ್ಲಿಷ್ ಬಾನಿಶ್ರೀ | ಅಲ್ಪಾವಧಿಯ ವಿರಾಮ | ಇಂಗ್ಲಿಷ್ ಬಾನಿಶ್ರೀ |
| **ಗುರುವಾರ** | ಬೆಳಗಿನ ಅಸೆಂಬ್ಲಿ | ಇಂಗ್ಲಿಷ್ ಮೊಖ್ತಾರ್ | ಗಣಿತ ಗೌತಮ್ | ಅಲ್ಪಾವಧಿಯ ವಿರಾಮ | ಹಿಂದಿ ಗಜೇಂದ್ರ | ಊಟದವಿರಾಮ | ಕಲೆ ಗೌತಮ್ | ಹಿಂದಿ ಗಜೇಂದ್ರ | ಇಂಗ್ಲಿಷ್ ಬಾನಿಶ್ರೀ | ಅಲ್ಪಾವಧಿಯ ವಿರಾಮ | ಹಿಂದಿ ಗಜೇಂದ್ರ |
| **ಶುಕ್ರವಾರ** | ಬೆಳಗಿನ ಅಸೆಂಬ್ಲಿ | ದೈಹಿಕಶಿಕ್ಷಣ ದೇವೇಂದ್ರ | ಗ್ರಂಥಾಲಯ ಗೌತಮ್ | ಅಲ್ಪಾವಧಿಯ ವಿರಾಮ | ಗಣಿತ ಗೌತಮ್ | ಊಟದವಿರಾಮ | ಹಿಂದಿ ಗಜೇಂದ್ರ | ಇಂಗ್ಲಿಷ್ ಮೊಖ್ತಾರ್ | ಇಂಗ್ಲಿಷ್ ಬಾನಿಶ್ರೀ | ಅಲ್ಪಾವಧಿಯ ವಿರಾಮ | ಗಣಿತ ಗೌತಮ್ |
| **ಶನಿವಾರ** | ಬೆಳಗಿನ ಅಸೆಂಬ್ಲಿ | ಚಟುವಟಿಕೆಗಳ ತರಗತಿ | ಚಟುವಟಿಕೆಗಳ ತರಗತಿ | ಅಲ್ಪಾವಧಿಯ ವಿರಾಮ | ಚಟುವಟಿಕೆಗಳ ತರಗತಿ | ಊಟದವಿರಾಮ | ಚಟುವಟಿಕೆಗಳ ತರಗತಿ | | | | |

ಚಿತ್ರ 1: 2ನೇ ತರಗತಿಯ ವೇಳಾಪಟ್ಟಿ

| ಆರಂಭಿಕಬಾಲ್ಯದಶಿಕ್ಷಣ (ಸೋಮವಾರ – ಶುಕ್ರವಾರ) | | | | | | | | |
|---|---|---|---|---|---|---|---|---|
| **09:15 - 9:35 (ಬೆ)** | **9:35 - 10:15 (ಬೆ)** | **10:15 - 10:45 (ಬೆ)** | **10:45 - 10:55 (ಬೆ)** | **10:55 - 11:35 (ಬೆ)** | **11:35 (ಬೆ)- 12:10 (ಮ)** | **12:10 - 1:00 (ಮ)** | **1:00 - 1:45 (ಮ)** | **1:45 - 2:30 (ಮ)** |
| ಬೆಳಗಿನ ಉಪಾಹಾರ | ವೃತ್ತದಸಮಯ (ವಿಷಯಾಧಾರಿತ) | ಇಂಗ್ಲಿಷ್ ಭಾಷಸಾಮಾಜಿಕ -ಭಾವನಾತ್ಮಕ ಕಥೆಹೇಳುವುದು ಓದುವುದು,ಬರೆಯುವುದು | ಅಲ್ಪಾವಧಿಯ ವಿರಾಮ | ಬೌದ್ಧಿಕ: ಸಂಖ್ಯಾಪೂರ್ವ, ಅಂಕಿಗಳು ಮತ್ತು ಪರಿಸರಅಧ್ಯಯನ | ಹಿಂದಿಭಾಷೆ: ಕಥೆ, ಕವಿತೆ,ಓದುವುದು-ಬರೆಯುವುದು | ಊಟದವಿರಾಮ | ಸ್ನಾಯುಚಲನೆಯಬೆಳವಣಿಗೆಗಾಗಿ (ಹೊರಾಂಗಣಮತ್ತುಒಳಾಂಗಣಆಟಗಳು) | ಸಾರಾಂಶೀಕರಣ, ಪುನರಾವರ್ತನೆ, ಮೌಲ್ಯಮಾಪನ |

ಚಿತ್ರ 2: ಪೂರ್ವ ಪ್ರಾಥಮಿಕ ತರಗತಿಯ ವೇಳಾಪಟ್ಟಿ

ಪರಿಣಾಮಕಾರಿ ಕಲಿಕೆಗಾಗಿ ನಾನು ನನ್ನ 45 ನಿಮಿಷಗಳ ತರಗತಿಯ ಅವಧಿಯನ್ನು ನಾಲ್ಕು ಪ್ರಮುಖ ಭಾಗಗಳನ್ನಾಗಿ ವಿಭಾಗಿಸಿಕೊಳ್ಳುತ್ತೇನೆ.

1. 5 ನಿಮಿಷ: ಮಕ್ಕಳನ್ನು ಪಾಠದ ಲಯಕ್ಕೆ ತರಲು ಪ್ರೇರಣಾದಾಯಕ ಚಟುವಟಿಕೆಗಳ ಮೂಲಕ ತರಗತಿಯನ್ನು ಆರಂಭಿಸುತ್ತೇನೆ.
2. 15 ನಿಮಿಷ: ಕವನ ವಾಚನ, ವಿಡಿಯೋ ವೀಕ್ಷಣೆ, ಕಥಾ ನಿರೂಪಣೆಗಳ ಮೂಲಕ ಆಲಿಸುವ ಮತ್ತು ಮಾತನಾಡುವ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸುತ್ತೇನೆ.
3. 15–20 ನಿಮಿಷ: ಪಠ್ಯ ವಿಷಯಕ್ಕೆ ಸಂಬಂಧಿಸಿದ ಚಟುವಟಿಕೆಗಳ ಮೇಲೆ ಕೇಂದ್ರೀಕರಿಸುತ್ತೇನೆ.
4. 5–10 ನಿಮಿಷ: ಪ್ರಮುಖ ಅಂಶಗಳನ್ನು ಸೇರಿಸಿ ಸಾರಾಂಶೀಕರಿಸುವುದರೊಂದಿಗೆ ಮುಕ್ತಾಯಗೊಳಿಸುತ್ತೇನೆ.

Come Back Soon ಎಂಬ ಕವಿತೆಗಾಗಿ ಹಾಕಿಕೊಂಡಿರುವ ವಿವರವಾದ ಯೋಜನೆ ಇಲ್ಲಿದೆ

Take a bus
Or take a train,
Take a boat
Or take a plane,
Take a taxi,
Take a car,
Maybe near
Or maybe far,
Take a rocket
To the moon,
But be sure
To come back soon.

ಆಕರ: NCERT Class 2nd English Mridang. Chapter 5. Come Back Soon. ಪುಟ: 38

ಪಾಠ: Come Back Soon (ಕವಿತೆ)

### ಕಲಿಕಾ ಫಲಿತಾಂಶಗಳು

### ಸಾಮಾನ್ಯ

- ಆಲಿಸುವ, ಮಾತನಾಡುವ, ಓದುವ ಮತ್ತು ಬರೆಯುವ (LSRW) ಕೌಶಲವನ್ನು ಅಭಿವೃದ್ಧಿಪಡಿಸುವುದು.

### ನಿರ್ದಿಷ್ಟ

- ವಿವಿಧ ಬಗೆಯ ಸಾರಿಗೆಯ ವ್ಯವಸ್ಥೆಯನ್ನು ಅರ್ಥಮಾಡಿ-ಕೊಳ್ಳುವುದು

### ಶಬ್ದಸಂಪತ್ತು

- ಸಾರಿಗೆ ವ್ಯವಸ್ಥೆಯಲ್ಲಿರುವ ವಿವಿಧ ಬಗೆಯ ಹೆಸರುಗಳನ್ನು ಕಲಿಯುವುದು ಹಾಗೂ ದೂರ, ಸಮೀಪ, ಬೇಗ, ಖಚಿತ ಹಾಗೂ ಚಂದ್ರ ಇಂತಹ ಪರಿಕಲ್ಪನೆಗಳನ್ನು ಗ್ರಹಿಸುವುದು.

### ಚಟುವಟಿಕೆಗಳು

1. ಪ್ರದರ್ಶನ ಫಲಕಗಳನ್ನು ರಚಿಸುವುದು: ಸಾರಿಗೆ ವ್ಯವಸ್ಥೆಯಲ್ಲಿನ ಪ್ರತಿ ವಿಧಗಳಿಗೆ ಸಂಬಂಧಿಸಿದಂತೆ ಬಗೆಬಗೆಯ ವಾಹನಗಳನ್ನು ತೋರಿಸುವ ಭಿತ್ತಿಚಿತ್ರಗಳನ್ನು ರಚಿಸಲು ತರಗತಿಯನ್ನು ಮೂರು ಗುಂಪುಗಳಾಗಿ (ವಾಯು, ಜಲ ಹಾಗೂ ಭೂಸಾರಿಗೆ) ವಿಭಜಿಸುವುದು.

2. ತೋರಿಸುವುದು ಮತ್ತು ಹೇಳುವುದು: ವಿವಿಧ ವಾಹನಗಳ ಚಿತ್ರಗಳನ್ನು ಹೊಂದಿರುವ ಫ್ಲಾಶ್ ಕಾರ್ಡ್ (ಮಿಂಚುಪಟ್ಟಿ) 'ಮ್ಯಾಜಿಕ್ ಬ್ಯಾಗ್' ಅನ್ನು ಬಳಸಿ, ಪ್ರತಿ ಮಗುವಿಗೆ ಕಾರ್ಡ್ ಅನ್ನು ಆಯ್ಕೆ ಮಾಡಲು ಮತ್ತು ಅದನ್ನು ಕುರಿತು ಮಾತನಾಡಲು ಪ್ರೋತ್ಸಾಹಿಸುವುದು.

3. ಒಗಟುಗಳನ್ನು ರೂಪಿಸುವುದು: ವಿದ್ಯಾರ್ಥಿಗಳನ್ನು ಜೋಡಿಗಳನ್ನಾಗಿ ವಿಭಾಗಿಸಿ. ವಿವಿಧ ವಾಹನಗಳಿಗೆ ಸಂಬಂಧಿಸಿದ ಒಗಟುಗಳನ್ನು ರಚಿಸುವ ಕೆಲಸವನ್ನು ಅವರಿಗೆ ಕೊಡುವುದು.

4. ಒರಿಗಾಮಿ: ಕಲಿಕಾ ಅನುಭವವನ್ನು ಹೆಚ್ಚಿಸುವುದಕ್ಕಾಗಿ ಮಕ್ಕಳಿಗೆ ಕಾಗದದ ರಾಕೆಟ್‌ಗಳು ಹಾಗೂ ದೋಣಿಗಳನ್ನು ರಚಿಸುವ ಮೂಲಕ ಹೊರಾಂಗಣ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸುವುದು.

### ಮಲ್ಟಿಮೀಡಿಯಾ ಸಮನ್ವಯತೆ:

- ವೀಡಿಯೋಗಳು: "ವ್ಹೀಲ್ಸ್ ಆನ್ ದಿ ಬಸ್", "ರೋ ರೋ ರೋ ಯುವರ್ ಬೋಟ್" ನಂತಹ ಪದ್ಯಗಳು ಮತ್ತು ಸಾರಿಗೆ ವಿಧಾನಗಳ ಕುರಿತ ಇಂತಹ ಮಾಹಿತಿಯುಕ್ತ ವೀಡಿಯೋಗಳಂತಹ ಶೈಕ್ಷಣಿಕ ಪದ್ಯಗಳನ್ನು ಒಳಗೊಳಸಿ-ಕೊಳ್ಳುವುದು.

- ಪುಸ್ತಕಗಳು: ತುಲಿಕಾ ಬುಕ್ಸ್ ಅವರ 'ಲೆಟ್ಸ್ ಗೋ' ಪುಸ್ತಕವು ಓದುವ ಕೌಶಲವನ್ನು ಹೆಚ್ಚಿಸುವಲ್ಲಿ ಉಪಯುಕ್ತವಾಗಿದೆ.

### ಸಾಮಾಜಿಕ-ಭಾವನಾತ್ಮಕ ಅಂಶಗಳು:

- ಸಾರ್ವಜನಿಕ ಸಾರಿಗೆಯಲ್ಲಿ ಇತರರಿಗೆ ಸಹಾಯ ಮಾಡುವ ಮತ್ತು ಸಂಚಾರ ನಿಯಮಗಳನ್ನು ಪಾಲಿಸುವುದರ ಪ್ರಾಮುಖ್ಯದ ವಿಷಯಗಳ ಸುತ್ತ ಅಭಿನಯ ಚಟುವಟಿಕೆ-ಯೊಂದಿಗೆ ಮುಕ್ತಾಯಗೊಳಿಸುವುದು.

ಈ ವಿಧಾನವು ಭಾಷಾ ಬೆಳವಣಿಗೆಯ ಹಾಗೂ ವಿಷಯ-ನಿರ್ದಿಷ್ಟ ಜ್ಞಾನದ ವಿವಿಧ ಅಂಶಗಳನ್ನು ಒಳಗೊಳ್ಳುತ್ತಲೇ ಇದು ವಿದ್ಯಾರ್ಥಿಗಳಿಗೆ ಸಮಗ್ರ ಹಾಗೂ ಸಂವಾದಾತ್ಮಕ ಕಲಿಕೆಯ ಅನುಭವವನ್ನು ಖಾತರಿಗೊಳಿಸುತ್ತದೆ.

### ಪಠ್ಯಕ್ರಮ ಯೋಜನೆ

ನಮ್ಮ ಬೋಧನಾ ವಿಧಾನದಲ್ಲಿ ಮಕ್ಕಳನ್ನು ತೊಡಗಿಸಿ-ಕೊಳ್ಳುವಂತಹ ಹಲವು ಕೆಲಸಗಳನ್ನು ಸಂಯೋಜಿಸುವುದರ ಮೂಲಕ ನಮ್ಮ ತರಗತಿಗಳನ್ನು ಚಟುವಟಿಕೆ ಆಧಾರಿತ ಮತ್ತು ಆನಂದದಾಯಕವಾಗಿರುವಂತೆ ವಿನ್ಯಾಸಗೊಳಿಸಲಾಗಿದೆ. ಪರಿಸರ ಅಧ್ಯಯನವನ್ನು ಪಠ್ಯಕ್ರಮದಲ್ಲಿ ಔಪಚಾರಿಕವಾಗಿ ಸೇರಿಸಿಲ್ಲವಾದರೂ ಇಂಗ್ಲಿಷ್ ಭಾಷಾ ತರಗತಿಗಳಲ್ಲಿ ನಾವು ದೇಹದ ಭಾಗಗಳು, ಕುಟುಂಬ, ಸಸ್ಯ, ಪ್ರಾಣಿಗಳು, ಸಾರಿಗೆ ಇತ್ಯಾದಿಗಳಂತಹ ಪರಿಸರ ಅಧ್ಯಯನದ ಪ್ರಮುಖ ವಿಷಯ ವಸ್ತುಗಳನ್ನು ಸಂಯೋಜಿಸುತ್ತೇವೆ. ಇದು ವಿದ್ಯಾರ್ಥಿಗಳ ಪದಸಂಪತ್ತನ್ನು ಶ್ರೀಮಂತಗೊಳಿಸುವುದಲ್ಲದೆ ತಮ್ಮ ಅತಿ ಸಮೀಪದ ಪರಿಸರದೊಂದಿಗೆ ಅವರ ಸಂಬಂಧವನ್ನು ಪೋಷಿಸುತ್ತದೆ.

ಕಲಿಕೆಯ ಅನುಭವಕ್ಕೆ ಭಾಷೆಯನ್ನು ಸಂಯೋಜಿಸುವ ನಿಟ್ಟಿನಲ್ಲಿ ಕಲೆ, ಸಂಗೀತ ಹಾಗೂ ದೈಹಿಕ ಅಭ್ಯಾಸದ ತರಗತಿಗಳು ಇದಕ್ಕೆ ಹೊರತಾಗಿಲ್ಲ. ಶಿಕ್ಷಕರು ವಿದ್ಯಾರ್ಥಿಗಳಿಗೆ ಈ ತರಗತಿಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಸೂಚನೆಗಳನ್ನು ಕೊಡುವ ಮೂಲಕ ವಿದ್ಯಾರ್ಥಿಗಳ ಭಾಷಾ ಬೆಳವಣಿಗೆಗೆ ಕೊಡುಗೆ ನೀಡುತ್ತಾರೆ. ಸಂಗೀತದ ಅವಧಿಗಳಲ್ಲಿ, ವಿದ್ಯಾರ್ಥಿಗಳು ಇಂಗ್ಲಿಷ್ ಮತ್ತು ಹಿಂದಿ ಹಾಡುಗಳನ್ನು ಕಲಿಯುತ್ತಾರೆ. ಕಲಾ ತರಗತಿಗಳು ಕೇವಲ

ಸೃಜನಶೀಲತೆಯನ್ನಲ್ಲ; ಅವು ಸಂಖ್ಯೆಗಳು ಮತ್ತು ವರ್ಣಮಾಲೆಗಳನ್ನು ಬಳಸಿಕೊಂಡು ಪ್ರಾಣಿಗಳನ್ನು ಚಿತ್ರಿಸುವುದನ್ನು ಸಹ ಒಳಗೊಂಡಿರುತ್ತವೆ. ಮುಖವಾಡಗಳ ತಯಾರಿಕೆ ಮತ್ತು ಓರಿಗಾಮಿಯಂತಹ ಚಟುವಟಿಕೆಗಳು ಕಲಿಕೆಗೆ ಸೃಜನಶೀಲ ಮತ್ತು ಪ್ರಾಯೋಗಿಕ ಆಯಾಮಗಳನ್ನು ನೀಡುತ್ತವೆ. ವಿದ್ಯಾರ್ಥಿಗಳು ವಿವಿಧ ಬಗೆಯ ಒಳಾಂಗಣ ಮತ್ತು ಹೊರಾಂಗಣ ಆಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ ಮತ್ತು ತಮ್ಮ ದೈಹಿಕ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ ಹಾಗೂ ಮಾನಸಿಕ ಚುರುಕುತನವನ್ನು ಹೆಚ್ಚಿಸಿಕೊಳ್ಳುತ್ತಾರೆ. ಹೆಚ್ಚುವರಿಯಾಗಿ ಯೋಗ ಮತ್ತು ಆಸನಗಳನ್ನು ಪಠ್ಯಕ್ರಮದಲ್ಲಿ ಸೇರಿಸುವುದು ಅವರ ಸಮಗ್ರ ಬೆಳವಣಿಗೆಗೆ ಮತ್ತಷ್ಟು ಕೊಡುಗೆ ನೀಡುತ್ತದೆ.

### ತರಗತಿಯ ಯೋಜನೆ

### ಮುದ್ರಿತ ಸಾಹಿತ್ಯ - ಸಮೃದ್ಧ ತರಗತಿ ಕೊಠಡಿ

ಚಾರ್ಟ್‌ಗಳು, ಕಥೆಗಳು, ಕವನಗಳು ಮತ್ತು ಚಿತ್ರಸಹಿತ ಚಾರ್ಟ್‌ಗಳಂತಹ ಮುದ್ರಿತ ಸಾಮಗ್ರಿಗಳನ್ನು ಬಳಸಿ ಬುನಾದಿ ಹಂತದ ತರಗತಿಗಳನ್ನು ಉನ್ನತೀಕರಿಸಲಾಗಿದೆ. ತರಗತಿಯ ಒಳಗೆ ಮತ್ತು ಹೊರಗೆ ಮುದ್ರಿತ ಸಾಹಿತ್ಯ ಸಮೃದ್ಧ ಪರಿಸರವು ವಿದ್ಯಾರ್ಥಿಗಳಲ್ಲಿ ತಮ್ಮ ಆರಂಭಿಕ ಸಾಕ್ಷರತೆಯ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ತೊಡಗಿಸುತ್ತದೆ. ಮುದ್ರಿತ ಸಾಹಿತ್ಯ ಸಮೃದ್ಧ ವಾತಾವರಣವನ್ನು ಸೃಷ್ಟಿಸುವುದು ಓದುವ ಹವ್ಯಾಸವನ್ನು ಬೆಳೆಸುತ್ತದೆ. ತರಗತಿಯ ವಿಷಯಗಳ ಆಧಾರದ ಮೇಲೆ ಚಾರ್ಟ್‌ಗಳನ್ನು ಪ್ರದರ್ಶಿಸುವುದು ಮತ್ತು ತರಗತಿಯಲ್ಲಿ ವಸ್ತುಗಳಿಗೆ ಲೇಬಲ್ ಮಾಡುವುದು ಇದಕ್ಕೆ ಕೊಡುಗೆ ನೀಡುತ್ತದೆ. ಲೆಟರ್ ಕಾರ್ಡ್‌ಗಳು, ಚಿತ್ರ ಕಾರ್ಡ್‌ಗಳು, ಮತ್ತು ಸ್ಟೋರಿ/ಕಥೆ ಕಾರ್ಡ್‌ಗಳನ್ನು ಒಳಗೊಂಡಂತೆ ಕಾರ್ಡ್‌ಗಳೊಂದಿಗೆ ಆಟವಾಡುವುದು ವಿದ್ಯಾರ್ಥಿಗಳಿಗೆ ವಸ್ತು ಹಾಗೂ ಅದನ್ನು ಸೂಚಿಸುವ ಪದಗಳ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ ಮತ್ತು ಅವರ ಓದುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಈ ಕೆಲವು ಮುದ್ರಿತ ಸಾಮಗ್ರಿಗಳನ್ನು ರಚಿಸುವಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವಿನ ಸಹಯೋಗವು ಸೃಜನಶೀಲತೆಯನ್ನು ಬೆಳೆಸುತ್ತದೆ.

### ಮಕ್ಕಳ ಮೂಲೆ

ತರಗತಿಯಲ್ಲಿ ವಿದ್ಯಾರ್ಥಿಗಳ ರಚನೆಗಳಾದ ರೇಖಾ ಚಿತ್ರಗಳನ್ನು ಪ್ರದರ್ಶಿಸುವ ಮಕ್ಕಳ ಕಾರ್ನರ್/ಮೂಲೆಗಳು ಅವರು ಪರಸ್ಪರ ಕಲಿಯಲು ಪ್ರೇರೇಪಿಸುತ್ತವೆ.

### ಉದ್ದನೆಯ ಕಪ್ಪು ಹಲಗೆ

ವಿದ್ಯಾರ್ಥಿಗಳು ತಮಗೆ ಅನಿಸಿದ್ದನ್ನು ಬರೆಯಲು ಮುಕ್ತ ಸಮಯಾವಕಾಶವಿರುವಂತೆ ಉದ್ದವಾದ ಕಪ್ಪು ಹಲಗೆಯನ್ನು ಮಕ್ಕಳಿಗೆ ಸಿಗುವಂತೆ ಮಾಡಿದಾಗ ವಿದ್ಯಾರ್ಥಿಗಳು ತಮ್ಮ ಆಲೋಚನೆಗಳನ್ನು ಚಿತ್ರಕಲೆ ಮತ್ತು ಬರವಣಿಗೆಯ ಮೂಲಕ ಮುಕ್ತವಾಗಿ ವ್ಯಕ್ತಪಡಿಸಲು ಅನುವು ಮಾಡಿಕೊಡುತ್ತದೆ. ಕೆಲವೊಮ್ಮೆ, ವಿದ್ಯಾರ್ಥಿಗಳು ಹುಟ್ಟುಹಬ್ಬದ ಶುಭಾಶಯಗಳನ್ನು ಬರೆಯುವುದು, ಪರಿಚಯವಿಲ್ಲದ ಪದಗಳು ಮತ್ತು ತರಗತಿಯಲ್ಲಿ ಕೇಳಿದ ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ಬರೆಯುವ ಮೂಲಕ ನಮ್ಮನ್ನು ಆಶ್ಚರ್ಯಚಕಿತರನ್ನಾಗಿಸುತ್ತಾರೆ.

### ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ವ್ಯವಸ್ಥೆ

ವಿದ್ಯಾರ್ಥಿಗಳು ಮಾಡುವ ಕೆಲಸಗಳಿಗೆ ತಕ್ಕ ಹಾಗೆ ಅವರು ಕುಳಿತುಕೊಳ್ಳುವ ವ್ಯವಸ್ಥೆಯನ್ನು ಮಾರ್ಪಡಿಸಲಾಗಿದೆ; ನಾವು ಎಲ್ಲ ಗುಂಪು ಚಟುವಟಿಕೆಗಳಿಗೂ "U" ಆಕಾರದಲ್ಲಿ (ಅರ್ಧ ವೃತ್ತಾಕಾರ) ಕುಳಿತುಕೊಳ್ಳುತ್ತೇವೆ.



ಚಿತ್ರ 4 ತರಗತಿಯಲ್ಲಿ ಪ್ರದರ್ಶಿಸಲು ವಿದ್ಯಾರ್ಥಿಗಳು ಪ್ರದರ್ಶಕಗಳನ್ನು ರಚಿಸುತ್ತಿರುವುದು

### ತರಗತಿಯ ಗ್ರಂಥಾಲಯ

ಪ್ರಥಮ್, ಬರ್ಖಾ, ಮತ್ತು ತುಲಿಕಾ ಪ್ರಕಾಶನ ಸಂಸ್ಥೆಗಳು ಪ್ರಕಟಿಸಿರುವ ಮಕ್ಕಳ ಪುಸ್ತಕಗಳನ್ನು ಆಯಾ ಹಂತಗಳಿಗೆ ಸೂಕ್ತವಾಗಿರುವ ರೀತಿಯಲ್ಲಿ ಆಯೋಜಿಸಲಾಗಿದ್ದು, ಈ ತರಗತಿ ಗ್ರಂಥಾಲಯವು ಮತ್ತೊಂದು ಪ್ರಕಾಶನ ಸಂಸ್ಥೆಯಾದ ಬಿಗ್ ಬುಕ್ಸ್ ನ ಪುಸ್ತಕಗಳನ್ನು ಕೂಡ ಒಳಗೊಂಡಿದೆ. ಆರಂಭದಲ್ಲಿ ವಿದ್ಯಾರ್ಥಿಗಳು ಓದುವ 'ನಟನೆ' ಯಲ್ಲಿ ತಮ್ಮನ್ನು



**ಚಿತ್ರ 5: ಮಕ್ಕಳು ಫ್ಲಾಷ್‌ಕಾರ್ಡ್‌ಗಳ ಮೂಲಕ ಕಲಿಯುತ್ತಿರುವುದು**

ತೊಡಗಿಸಿಕೊಳ್ಳುತ್ತಾರೆ, ನಂತರ ಪರಿಚಿತ ಪದಗಳನ್ನು ಗುರುತಿಸಲು ಪ್ರಯತ್ನಿಸುತ್ತಾರೆ ಮತ್ತು ಚಿತ್ರಗಳ ಆಧಾರದ ಮೇಲೆ ತಮ್ಮದೇ ಆದ ಕಥೆಗಳನ್ನು ರಚಿಸುತ್ತಾರೆ. 2ನೆಯ ತರಗತಿಯ ವಿದ್ಯಾರ್ಥಿಗಳಿಗೆ ನಾವು ಮನೆಯಲ್ಲಿ ಓದುವುದಕ್ಕೆ ಉತ್ತೇಜನ ನೀಡಲು ಬರ್ಖಾ ಮತ್ತು ತುಲಿಕಾ ಸರಣಿಯಿಂದ ಹಂತ–1ರ ಪುಸ್ತಕಗಳನ್ನು ನೀಡುತ್ತೇವೆ.

## ಸಹ ಶಿಕ್ಷಕರು

ಬಹು–ಹಂತದ ತರಗತಿಯಲ್ಲಿ ಪ್ರತಿ ಮಗುವಿನ ಕಲಿಕೆಗೆ ಸಂಬಂಧಿಸಿದಂತೆ ಸಮಾನತೆಯನ್ನು ಕಾಯ್ದುಕೊಳ್ಳುವುದು ಒಂದು ಸವಾಲಾಗಿರುತ್ತದೆ. ಇದನ್ನು ಪರಿಹರಿಸುವಲ್ಲಿ ಸಹ ಶಿಕ್ಷಕರ ಪಾತ್ರ ಮಹತ್ತ್ವದ್ದಾಗಿರುತ್ತದೆ. ಮುಖ್ಯ ಶಿಕ್ಷಕರು ಸಹ ಶಿಕ್ಷಕರಿಗೆ ಸಹಕಾರ ನೀಡುತ್ತಾ, ಅವರು ಆರಂಭದಲ್ಲಿ ಅಗತ್ಯವಿರುವ ಮಕ್ಕಳಿಗೆ ವೈಯಕ್ತಿಕವಾಗಿ ಗಮನ ನೀಡುತ್ತಾರೆ. ಸಾಧ್ಯವಾಗು–ವಂತೆ ಸ್ಪಿನ್ನರ್, ವರ್ಣಮಾಲೆ/ಆಲ್ಫಾಬೆಟ್, ಫ್ಲಾಶ್ ಕಾರ್ಡ್ ಮತ್ತು ಅಭ್ಯಾಸ ಹಾಳೆಗಳಂತಹ ಬೋಧನಾ–ಕಲಿಕಾ ಸಾಮಗ್ರಿಗಳನ್ನು ಕಲಿಕೆಗೆ ಬೆಂಬಲ ನೀಡುವ ರೀತಿಯಲ್ಲಿ ಬಳಸಲಾಗುತ್ತದೆ ಮತ್ತು ಕೆಲವು ವಾರಗಳಲ್ಲಿ ಧನಾತ್ಮಕ ಪರಿಣಾಮಗಳು ಕಂಡುಬರುತ್ತವೆ ಮತ್ತು ಇದು ಎಲ್ಲ ವಿದ್ಯಾರ್ಥಿಗಳನ್ನು ಒಂದೇ ತರಗತಿಯಲ್ಲಿ ಸಮಗ್ರಗೊಳಿಸುವುದರತ್ತ ಮುನ್ನಡೆಸುತ್ತದೆ.

## ಪೋಷಕರ ಒಳಗೊಳ್ಳುವಿಕೆ

ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರು, ಶಾಲೆ ಮತ್ತು ಶಿಕ್ಷಕರ ಸಹಯೋಗವು ನಿರ್ಣಾಯಕವಾಗಿರುತ್ತದೆ. ತಯಾರಿ ನೀಡುವ ಕಾರ್ಯಕ್ರಮಗಳು, ಪೋಷಕರ –ಶಿಕ್ಷಕರ ಸಭೆಗಳು, ನಿಯಮಿತ ಕರೆಗಳು ಮತ್ತು (WhatsApp) ವಾಟ್ಸ್ ಆಪ್ ನಲ್ಲಿ ಸೂಚನಾ ವಿಡಿಯೋಗಳನ್ನು ಹಂಚಿಕೊಳ್ಳುವುದು ಪೋಷಕರನ್ನು ಒಳಗೊಳಿಸಿಕೊಳ್ಳಲು ನಾವು ಬಳಸುವ ಕೆಲವು ಕಾರ್ಯತಂತ್ರಗಳಾಗಿವೆ. ತಮ್ಮ ಮಕ್ಕಳು ಕೈಗೊಳ್ಳುವ ಕಾರ್ಯಚಟುವಟಿಕೆಗಳ ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಲು ಪೋಷಕರನ್ನು ಪ್ರೋತ್ಸಾಹಿಸುವುದು ಮಕ್ಕಳ ಕಲಿಕಾ ಪ್ರಕ್ರಿಯೆಯಲ್ಲಿ ಅವರು ತಮ್ಮನ್ನು ಒಳಗೊಳಿಸಿಕೊಳ್ಳಲು ಮತ್ತು ಅದನ್ನು ಅರ್ಥಮಾಡಿಕೊಳ್ಳಲು ಇದು ಅವರನ್ನು ಉತ್ತೇಜಿಸುತ್ತದೆ.

## ಕೊನೆಯ ಮಾತು

ನಾವು ಜಾಗ್ರತೆಯಿಂದ ಯೋಜಿಸುವ ಚಟುವಟಿಕೆಗಳು ಹಾಗೂ ಶಿಕ್ಷಕರು – ಪೋಷಕರು – ಸಮುದಾಯಗಳ ನಡುವಿನ ಸಹಯೋಗದ ಪ್ರಯತ್ನಗಳು ಮಗುವಿನ ಶೈಕ್ಷಣಿಕ ಪ್ರಯಾಣದ ಬೆನ್ನೆಲುಬನ್ನು ರೂಪಿಸುತ್ತವೆ; ಪ್ರತಿ ಮಗುವೂ ತನ್ನ ಸಮಗ್ರ ಬೆಳವಣಿಗೆಗೆ ಅಗತ್ಯವಾಗಿರುವ ಗಮನವನ್ನೂ ಬೆಂಬಲವನ್ನೂ ಪಡೆಯುತ್ತಾಳೆ/ನೆ ಎಂಬುದನ್ನು ಇದು ಖಾತರಿಪಡಿಸುತ್ತದೆ. ನಡೆಯುತ್ತಿರುವ ಸಂಶೋಧನೆ ಅನ್ವೇಷಣೆಗಳಿಗೆ ನಾವು ಬದ್ಧರಾಗಿರುತ್ತೇವೆ ಹಾಗೂ ನಿರಂತರವಾದ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸಲು ನವೀನ ವಿಧಾನಗಳು ನಾವೀನ್ಯದಿಂದ ಕೂಡಿದ ಹಲವು ಮಾರ್ಗಗಳು ಹಾಗೂ ಬೋಧನಾ–ಕಲಿಕಾ ವಿಧಾನಗಳ ನಿರಂತರ ಅನ್ವೇಷಣೆಯಲ್ಲಿದ್ದೇವೆ.

### ಕೊನೆಯ ಟಿಪ್ಪಣಿ

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–ಬುನಾದಿ ಹಂತದ ಬೆಳವಣಿಗೆಯ ಐದು ಕ್ಷೇತ್ರಗಳನ್ನು ನಿಗದಿಪಡಿಸುತ್ತದೆ: ದೈಹಿಕ ಬೆಳವಣಿಗೆ, ಸಾಮಾಜಿಕ–ಭಾವನಾತ್ಮಕ ಮತ್ತು ನೈತಿಕ ಬೆಳವಣಿಗೆ, ಬೌದ್ಧಿಕ ಬೆಳವಣಿಗೆ, ಸೌಂದರ್ಯೋಪಾಸನೆ ಮತ್ತು ಸಾಂಸ್ಕೃತಿಕ ಬೆಳವಣಿಗೆ..

---



**ಬಾನಿಶ್ರೀ ಮೊಹಾಪಾತ್ರ** ಅವರು ಛತ್ತೀಸ್‌ಗಢದ ಧಮ್ತುರಿಯಲ್ಲಿ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಾರೆ. ಅವರು ದಯಾನಂದ್ ಆಂಗ್ಲೋ–ವೇದಿಕ್ ಶಾಲೆಗಳ ಆರಂಭಿಕ ಶಿಕ್ಷಣ ಅಭಿವೃದ್ಧಿ ಕಾರ್ಯಕ್ರಮದ ಮುಖ್ಯ ತರಬೇತುದಾರರಾಗಿ ಕೆಲಸ ಮಾಡಿರುವುದೂ ಸೇರಿದಂತೆ 12 ವರ್ಷಗಳ ಬೋಧನಾ ಅನುಭವವನ್ನು ಹೊಂದಿದ್ದಾರೆ. ಅವರು ಬೋಧನೆಯತ್ತ ಅಪಾರವಾದ ಒಲವನ್ನು ಹೊಂದಿರುವವರು. ಅವರನ್ನು banishree.mohapatra@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಉಷಾ ಆಂಬ್ರೋಸ್** | ಪರಿಶೀಲನೆ: **ಲತಾ ಕೆ. ಸಿ.**